ದಿನಾಂಕ : 19-06-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ಗುಬ್ಬಿಯ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಈ ದಾವೆಯ 1, 2 ಮತ್ತು 6 ನೇ ಪ್ರತಿವಾದಿಗಳ ವಿರುದ್ಧ ಪ್ರಸ್ತುತ ದಾವೆಯ 3 ನೇ ಸ್ವತ್ತಿಗೆ ಸಂಬಂಧಿಸಿ ಓ ಎಸ್ 266/2024 ಎಂಬುದಾಗಿ ಘೋಷಣಾತ್ಮಕ ಆದೇಶಕ್ಕಾಗಿ ದಾವೆಯನ್ನು ಸಲ್ಲಿಸಿದ್ದೆವು ಎಂದರೆ ಸರಿ . ಸದರಿ ದಾವೆಯ ವಿಚಾರವನ್ನು ಪ್ರಸ್ತುತ ದಾವೆಯಲ್ಲಿ ತಿಳಿಸಿಲ್ಲ ಎಂದರೆ ಸರಿ . ಓ ಎಸ್ 266/2024 ರ ದಾವೆಯಲ್ಲಿ ಈ ದಾವೆಯ ವಾದಿಯನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ . ನಿಡಿ -7 ರಂತೆ ಮಾಡಿಕೊಂಡಿರುವ ಪಾರಿಕತ್ ನಲ್ಲಿ ವಾದಿಯು ಪಕ್ಷಗಾರರಲ್ಲ ಎಂದರೆ ಸರಿ . ವಾದಿಗೆ ಬರಬೇಕಾದ ಭಾಗಂಶದ ಸ್ವತ್ತನ್ನು ತಪ್ಪಿಸುವ ಸಲುವಾಗಿ 05-12-2009 ರಂದು ನಿಡಿ -7 ರಂತೆ ಪಂಚಾಯಿತಿ ಪಾರಿಕತ್ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ . ಈ ದಾವೆಯ ದಾವಾ ಷೆಡ್ಯೂಲ್ 3 ನೇ ಸ್ವತ್ತಿನಲ್ಲಿ ವಾದಿಗೆ ಬರಬೇಕಾದ ಭಾಗಂಶದ ಸ್ವತ್ತನ್ನು ತಪ್ಪಿಸುವ ಸಲುವಾಗಿ ಅಸಲು ವಿವರಗಳನ್ನು ಮುಚ್ಚಿಟ್ಟು ಓ ಎಸ್ 266/2024 ರಲ್ಲಿ ಡಿಕ್ರಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ . ಪ್ರತಿರಕ್ಷಣಾ ಪತ್ರಕ್ಕೆ ವಿವರಗಳನ್ನು ವಕೀಲರೆ ನೀಡಿದ್ದಾರೆ . ನನ್ನ ತಂದೆಗೆ ವಾದಿಗೆ ಇದುವರೆಗೂ ಕುಟುಂಬದ ಸ್ವತ್ತುಗಳಲ್ಲಿ ಭಾಗಾಂಶ ನೀಡಿಲ್ಲ ಎಂದರೆ ಸರಿಯಲ್ಲ . ಅಮ್ಮನಘಟ್ಟ ಗ್ರಾಮದ ಸರ್ವೆ ನಂ. 6/4 ರಲ್ಲಿ ವಾದಿಗೆ ಸ್ವತ್ತನ್ನು ನೀಡಲಾಗಿದೆ . ಸದರಿ ಸ್ವತ್ತು ಈ ದಾವೆಯ ಷೆಡ್ಯೂಲ್ ಸ್ವತ್ತಲ್ಲ ಎಂದರೆ ಅದು ನಮ್ಮ ಕುಟುಂಬದ ಜಂಟಿ ಸ್ವತ್ತು ಎಂದು ತಿಳಿಸಿದ್ದಾರೆ . ಸದರಿ ಸರ್ವೆ ನಂ. 6/4 ರ ಸ್ವತ್ತನ್ನು 1987 ನೇ ಸಾಲಿನಲ್ಲಿ ವಾದಿಯ ತಂದೆ ಮತ್ತು ನಮ್ಮ ತಂದೆ ಸೇರಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ , ಚಿಕ್ಕಬಸಪ್ಪ ರವರು ಮಾರಾಟ ಮಾಡಿದ್ದಾರೆ ಎಂದು ಸಾಕ್ಷಿ ಹೇಳಿದ್ದಾರೆ . ದಾವಾ ಸ್ವತ್ತುಗಳಲ್ಲಿ ವಾದಿಗೆ ನೀಡುವ ಭಾಗಾಂಶದ ಸ್ವತ್ತನ್ನು ತಪ್ಪಿಸುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ದಾವಾ ಷೆಡ್ಯೂಲ್ 4 ನೇ ಸ್ವತ್ತಿನಲ್ಲಿ

ವಾದಿಗೆ ನೀಡುವ ಭಾಗಾಂಶವನ್ನು ತಪ್ಪಿಸುವ ಸಲುವಾಗಿ 4 ನೇ ಪ್ರತಿವಾದಿಗೆ ಅದನ್ನು ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ , ಹಣದ ಅವಶ್ಯಕತೆ ಇದ್ದುದರಿಂದ ಅಡಮಾನ ಮಾಡಿದ್ದೇವೆ ಎಂದು ತಿಳಿಸಿದ್ದಾರೆ .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .